# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ– 04, ಭೂತರಾಮನಹಟ್ಟಿ, ಬೆಳಗಾವಿ – 591156

(ನ್ಯಾಕ್ ಮಾನ್ಯತೆ B+ ಗ್ರೇಡ್ – 2021) PM-USHA (MERU)

# RANI CHANNAMMA UNIVERSITY

Vidyasangama, National Highway – 04, Bhootaramanahatti, Belagavi – 591156

(NAAC Accredited with B+ Grade – 2021) PM-USHA (MERU)

E-mail: registrar@rcub.ac.in

ಕುಲಸಚಿವರ ಕಾರ್ಯಾಲಯ

Office of the Registrar

Website: www.rcub.ac.in

Phone No.: 0831-2565234


ಸಂ: ರಾಚವಿ/ಬೆಳಗಾವಿ/ಕುಸಕಾ/2025-26/ 7060

ದಿನಾಂಕ: 28-03-2026.

28 MAR 2026

## ಸುತ್ತೋಲೆ

ವಿಷಯ: ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಎಲ್ಲಾ ಅಧಿಕೃತ ಮಾಹಿತಿಗಳನ್ನು ಕಡ್ಡಾಯವಾಗಿ ವೆಬ್‌ಸೈಟ್ ಮೂಲಕ ಮಾತ್ರ ಪ್ರಕಟಿಸುವ ಕುರಿತು.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿದ್ಯಾಮಂಡಳ, ಪರೀಕ್ಷಾ ವಿಭಾಗ, ಕಾಲೇಜು ಅಭಿವೃದ್ಧಿ ಮಂಡಳಿ, ಎಲ್ಲ ಆಡಳಿತ ಕಚೇರಿಗಳ ಮುಖ್ಯಸ್ಥರುಗಳು, ಪ್ರಾಚಾರ್ಯರು ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿ ಹಾಗೂ ಸಂಯೋಜಕರು, ಸ್ನಾತಕೋತ್ತರ ಕೇಂದ್ರ ವಿಜಯಪುರ ಇವರಿಗೆ ಈ ಮೂಲಕ ತಿಳಿಸುವುದೇನೆಂದರೆ, ಇತ್ತೀಚಿನ ದಿನಗಳಲ್ಲಿ ವಿವಿಧ ವಿಭಾಗಗಳಿಂದ ನೀಡಲಾಗುತ್ತಿರುವ ಅಧಿಕೃತ ಮಾಹಿತಿಗಳಲ್ಲಿ ಏಕರೂಪತೆ ಮತ್ತು ಪಾರದರ್ಶಕತೆ ಕಾಪಾಡುವ ಉದ್ದೇಶದಿಂದ, ಇನ್ನುಮುಂದೆ ಎಲ್ಲಾ ಅಧಿಕೃತ ಮಾಹಿತಿಗಳು ಹಾಗೂ ಪ್ರಕಟಣೆಗಳನ್ನು ಕೇವಲ ವಿಶ್ವವಿದ್ಯಾಲಯದ ಅಧಿಕೃತ ವೆಬ್‌ಸೈಟ್ ಮೂಲಕ ಮಾತ್ರ ಪ್ರಕಟಿಸುವ ಅವಶ್ಯವಿದ್ದು, ಆದ್ದರಿಂದ ಯಾವುದೇ ಮಾಹಿತಿ, ಸೂಚನೆ, ಅಧಿಸೂಚನೆ, ವೇಳಾಪಟ್ಟಿ ಇತ್ಯಾದಿಗಳನ್ನು ಇಮೇಲ್, ವಾಟ್ಸಪ್ ಅಥವಾ ಇತರ ಮಾಧ್ಯಮಗಳ ಮೂಲಕ ಹಂಚುವುದರ ಬದಲಾಗಿ ಮೊದಲಿಗೆ ವೆಬ್‌ಸೈಟ್‌ನಲ್ಲಿ ಪ್ರಕಟಿಸಿ ನಂತರವೇ ವೆಬ್‌ಸೈಟ್ ಲಿಂಕ್‌ನ್ನು ಬಳಸಿ ಇತರ ಮಾಧ್ಯಮಗಳಲ್ಲಿ ಹಂಚಿಕೊಳ್ಳಲು ತಿಳಿಸಲಾಗಿದೆ.

ಸದರಿ, ಮಾಹಿತಿಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲು, ಸಂಬಂಧಪಟ್ಟ ದಾಖಲೆಗಳನ್ನು ಇ-ಮೇಲ್ ವಿಳಾಸ: webadmin@rcub.ac.in, ಹಾಗೂ ಅದರ ಪ್ರತಿಯನ್ನು (CC) ಕಡ್ಡಾಯವಾಗಿ registrar@rcub.ac.in ಗೆ ಕಳುಹಿಸತಕ್ಕದ್ದು (ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: ಶ್ರೀ ವಿಕ್ರಮ್ ಐ. ಮಿರ್ಜಿ, ವೆಬ್ ಅಡ್ಮಿನ್ - 9513151779).

ಈ ಸೂಚನೆಯನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಎಲ್ಲಾ ಸಂಬಂಧಿತ ಅಧಿಕಾರಿಗಳು ಹಾಗೂ ಸಿಬ್ಬಂದಿಗಳಿಗೆ ತಿಳಿಸಲಾಗಿದೆ.

ಸಂತೋಷ ಕಾಮಗೌಡ ಕೆ.ಎ.ಎಸ್.,
ಕುಲಸಚಿವರು

ಇವರಿಗೆ,

1. ಕುಲಸಚಿವರು (ಮೌಲ್ಯಮಾಪನ),ಪರೀಕ್ಷಾ ವಿಭಾಗ, ರಾಚವಿ, ಬೆಳಗಾವಿ.
2. ಉಪ ಕುಲಸಚಿವರು, ಕುಲಸಚಿವರ ಕಾರ್ಯಾಲಯ, ಬೆಳಗಾವಿ.
3. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ರಾಚವಿ, ಬೆಳಗಾವಿ.
4. ನಿರ್ದೇಶಕರು, ಐಟಿ ಕೋಶ, ರಾಚವಿ, ಬೆಳಗಾವಿ. ಇವರಿಗೆ, ಮುಂದಿನ ಕ್ರಮಕ್ಕಾಗಿ.
5. ಪ್ರಾಚಾರ್ಯರು, ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿ.
6. ಸಂಯೋಜಕರು, ಸ್ನಾತಕೋತ್ತರ ಕೇಂದ್ರ, ತೊರವಿ ವಿಜಯಪುರ.
7. ಎಲ್ಲ ಆಡಳಿತ ಕಚೇರಿಗಳ ಮುಖ್ಯಸ್ಥರುಗಳು, ರಾಚವಿ, ಬೆಳಗಾವಿ.
8. ರಕ್ಷಾ ಪ್ರತಿ.

ಪ್ರತಿ ಮಾಹಿತಿಗಾಗಿ,

1. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ಕುಲಪತಿಗಳ ಸಚಿವಾಲಯ, ರಾಚವಿ, ಬೆಳಗಾವಿ.